## ***ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ***

***ಸಿ.ಸಿ.ನಂ ಃ 128/2016***

ಪಿಡಬ್ಲ್ಯು - 1

ಸಿಡಬ್ಲ್ಯು - 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಿದ್ದಪ್ಪ ಎಂ ಸಿ |
| ತಂದೆಯ ಹೆಸರು | ಃ | ಚಿನ್ನಪ್ಪ ಎಂ ಎನ್ |
| ವಯಸ್ಸು | ಃ | 44 ವರ್ಷ |
| ವೃತ್ತಿ | ಃ | ಖಾಸಗಿ ನೌಕರ |
| ವಾಸಸ್ಥಳ | ಃ | ಅಮ್ಮತಿ |

***ದಿನಾಂಕ ಃ 31-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಖ್ಯ ವಿಚಾರಣೆ ಃ ಶ್ರೀ. ಎ.ಪಿ.ಪಿ. ವಕೀಲರಿಂದ ಃ-**

ದಿನಾಂಕ 06-01-2015 ರಂದು ನಮ್ಮ ಆರೇಂಜ್ ಕೌಂಟಿ ರೆಸಾರ್ಟ್ ಗೆ ತಂಗಲು ಚಾಸಾ-2 ರಿಂದ 3 ರವರು ಬಂದಿದ್ದರು. ಅವರು ನಮಗೆ ನಾವು ತಂಗಿದ್ದ ಕಾಟೇಜ್ ನಂ 408, 302 ಮತ್ತು 507 ರಲ್ಲಿ ಕಳ್ಳತನ ಆಗಿದೆ ಎಂದು ನಮಗೆ ಪಿರ್ಯಾದನ್ನು ನೀಡಿರುತ್ತಾರೆ. ನಂತರ ನಾವು ಸದರಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ, ಮೇಲ್ನೋಟಕ್ಕೆ ಕಳ್ಳತನವಾಗಿರುವುದು ಕಂಡು ಬಂದಿರುತ್ತದೆ. ನಂತರ ನಾವು ಪೋಲಿಸರಿಗೆ ಈ ಕುರಿತು ಮಾಹಿತಿಯನ್ನು ನೀಡಿರುತ್ತೇವೆ. ನಂತರ ಪೋಲಿಸರು ಬಂದು ಪರಿಶೀಲನೆ ಮಾಡಿದಾಗ ಕಳ್ಳತನವಾಗಿರುವುದು ಬೆಳಕಿಗೆ ಬಂದಿರುತ್ತದೆ.

ಆರೋಪಿತರು ಕಾಟೇಜ್ ಗಳಿಗಿದ್ದ ಬಾಗಿಲಿನ ಲಾಕ್ ಗಳನ್ನು ಬಿಚ್ಚಿ, ಒಳಗೆ ಪ್ರವೇಶಿಸಿ, ಅಲ್ಲಿ ಇಟ್ಟಿದ್ದ ಚಿನ್ನಾಭರಣ ಮತ್ತು ನಗದು ಹಾಗೂ ವಿದೇಶಿ ಕರೆನ್ಸಿ, ಕೈಗಡಿಯಾರಗಳನ್ನು ಕಳ್ಳತನ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಎಲ್ಲಾ ರೆಸಾರ್ಟ್ ಗಳಿಗೂ ಸರಣಿ ಕಳ್ಳತನಗಳು ಆಗುತ್ತಿತ್ತು. ನಾವು ಆ ಸಂದರ್ಭದಲ್ಲಿ ನಮ್ಮ ಭದ್ರತಾ ಸಿಬ್ಬಂದಿಗಳನ್ನು ಎಚ್ಚರಿಕೆ ಇರುವಂತೆ ತಿಳಿಸಿದ್ದೇವು. ಆದರೂ ಕೂಡ ಆರೋಪಿತರು ನಮ್ಮ ರೆಸಾರ್ಟ್ ನಲ್ಲಿ ಕಳ್ಳತನ ಮಾಡಿರುತ್ತಾರೆ. ಅದೇ ರೀತಿಯಾಗಿ ಆರೋಪಿತರು ಕ್ಲಬ್

ಮಹೀಂದ್ರ ರೆಸಾರ್ಟ್ ನಲ್ಲಿ ಕಳ್ಳತನ ಮಾಡಲು ಪ್ರಯತ್ನಿಸುತ್ತಿದ್ದಾಗ, ಆರೋಪಿತರು ಸಿಕ್ಕಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು  ಶ್ರೀ. ಸರ್ಕಾರಿ ವಕೀಲರಿಂದಃ-**

ಚಾಸಾ-2 ರಿಂದ 4 ರವರು ನಿಮ್ಮ ಆರೇಂಜ್ ಕೌಂಟಿ ರೆಸಾರ್ಟ್ ನಲ್ಲಿ ತಂಗಿದ್ದರು ಎಂದರೆ ಸರಿ. ಅವರು ಬಾಗಿಲನ್ನು ಹಾಕಿಕೊಂಡು ಬೆಳಿಗ್ಗೆ ವಿಹಾರಕ್ಕೆ ಹೋಗುವ ಸಂದರ್ಭದಲ್ಲಿ ಅವರಿಗೆ ತಿಳಿರುತ್ತದೆ ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿ. ಅವರ ಕಾಟೇಜ್‌ನಿಂದ ಸುಮಾರು ರೂ. 200000/- ಮೌಲ್ಯದ ಚಿನ್ನಭರಣ, ವಾಚ್ ಮತ್ತು ನಗದು ಕಳ್ಳತನ ಆಗಿರುತ್ತದೆ ಎಂದರೆ ಸರಿ. ನೀವು ಈ ಕುರಿತು ದಿನಾಂಕ 07-01-2015 ರಂದು ಪೋಲಿಸರಿಗೆ ಒಂದು ಪಿರ್ಯಾದನ್ನು ನೀಡಿರುತ್ತೀರಿ ಎಂದರೆ ಸರಿ.

ಸದರಿ ಪಿರ್ಯಾದನ್ನು ಸಾಕ್ಷಿಗೆ ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಿರ್ಯಾದನ್ನು ನಿಪಿ1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನಂತರ ಪೋಲಿಸರು ಸ್ಥಳಕ್ಕೆ ಭೇಟಿ ನೀಡಿ ಸದರಿ ಮೂರು ಕಾಟೇಜ್ ಗಳಲ್ಲಿ ಪ್ರತ್ಯೇಕವಾಗಿ ಮಹಜರ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಕಾಟೇಜ್ ನಂ 302 ರಲ್ಲಿ ಜರುಗಿಸಲಾದ ಕೃತ್ಯ ಸ್ಥಳದ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನುನಿಪಿ2 ಎ ಎಂದು ಗುರುತಿಸಲಾಯಿತು. ಕಾಟೇಜ್ ನಂ 408 ರಲ್ಲಿ ಜರುಗಿಸಲಾದ ಕೃತ್ಯ ಸ್ಥಳದ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನುನಿಪಿ3 ಎ ಎಂದು ಗುರುತಿಸಲಾಯಿತು. ಕಾಟೇಜ್ ನಂ 507 ರಲ್ಲಿ ಜರುಗಿಸಲಾದ ಕೃತ್ಯ ಸ್ಥಳದ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನುನಿಪಿ4 ಎ ಎಂದು ಗುರುತಿಸಲಾಯಿತು. ಚಾಸಾ-4 ರವರು ಚಾಸಾ-1 ರವರಿಗೆ ನೀಡಿದ ಪಿರ್ಯಾದನ್ನು ನಿಪಿ5 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ5 ಎ ಎಂದು ಗುರುತಿಸಲಾಯಿತು. ಚಾಸಾ-2 ರವರು ಚಾಸಾ-1 ರವರಿಗೆ ನೀಡಿದ ಪಿರ್ಯಾದನ್ನು ನಿಪಿ6 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ6 ಎ ಎಂದು

ಗುರುತಿಸಲಾಯಿತು. ಚಾಸಾ-3 ರವರು ಚಾಸಾ-1 ರವರಿಗೆ ನೀಡಿದ ಪಿರ್ಯಾದನ್ನು ನಿಪಿ7 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ7 ಎ ಎಂದು ಗುರುತಿಸಲಾಯಿತು.

<u>ಪಾಟಿ ಸವಾಲು : ಶ್ರೀ.</u> ಸಿ. ಕೆ. ಪಿ. ವಕೀಲರಿಂದ :

ನಾನು ಆರೇಂಜ್ ಕೌಂಟಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಬಗ್ಗೆ ಪೋಲಿಸರು ದಾಖಲೆಯನ್ನು ತೆಗೆದುಕೊಂಡಿರುತ್ತಾರೆ. ಜಾರ್ಜ್ ಥಾಮಸ್ ರಾಮಪ್ಪ ನಮ್ಮ ರೆಸಾರ್ಟ್ ನ ಮಾಲೀಕರಾಗಿರುತ್ತಾರೆ. ನಮ್ಮ ರೆಸಾರ್ಟ್ ಗೆ ಬರುವ ಅತಿಥಿಗಳ ವಿಳಾಸ ಮತ್ತು ದಾಖಲಾತಿಗಳನ್ನು ಪಡೆದು, ನಮ್ಮ ಕಛೇರಿಯ ರಿಜಿಸ್ಟರ್ ನಲ್ಲಿ ನಮೂದು ಮಾಡಿ ವ್ಯವಸ್ಥಾಪಕರಿಗೆ ನೀಡುತ್ತೇವೆ. ಕಾಟೇಜ್ ನಂ 302, 408 ಮತ್ತು 507 ಕಾಟೇಜ್‌ಗೆ ಬಂದ ಅತಿಥಿಗಳು ಮೊದಲೇ ಮುಂಗಡ ಬುಕಿಂಗ್ ಮಾಡಿ ಬಂದಿರುತ್ತಾರೆ. ಸದರಿ ಬುಕಿಂಗ್ ನ್ನು ನಮ್ಮ ಸೇಲ್ಸ್ ಆಫೀಸರ್ ಮಾಡಿರುತ್ತಾರೆ. ನಮ್ಮ ರೆಸಾರ್ಟ್ ಗೆ ಬಂದ ಸಂದರ್ಭದಲ್ಲಿ ಅವರು ಬುಕಿಂಗ್ ಸಂದರ್ಭದಲ್ಲಿ ನೀಡಿದ ಮಾಹಿತಿ ಹಾಗೂ ಬಂದ ನಂತರ ನೀಡಿದ ದಾಖಲಾತಿಗಳಿಗೂ ಒಂದಕ್ಕೊಂದು ತಾಳೆ ಆಗುವಂತೆ ಪರಿಶೀಲನೆ ಮಾಡುತ್ತೇವೆ.

ಸದರಿ ದಾಖಲೆಗಳನ್ನು ನಾವು ಪೋಲಿಸರಿಗೆ ನೀಡಿದ್ದೇವೆ. ಸದರಿ ದಾಖಲೆಗಳಾಗಲಿ ಅಥವಾ ಲೆಡ್ಜರ್ ಆಗಲಿ ನ್ಯಾಯಾಲದಲ್ಲಿ ಇರುವುದಿಲ್ಲ ಎಂದರೆ ಸರಿ. ನಮ್ಮ ರೆಸಾರ್ಟ್ ನಲ್ಲಿ ಸುಮಾರು 250 ಜನ ಕೆಲಸಗಾರರಿದ್ದಾರೆ. ಕೊಠಡಿಗಳ ನಿರ್ವಹಣೆ ಮಾಡಲು ಅಂದರೆ ಹೌಸ್ ಕೀಪಿಂಗ್ ಕೆಲಸದವರು ಸುಮಾರು 20 ರಿಂದ 22 ಜನರಿದ್ದಾರೆ. ನಮ್ಮ ರೆಸಾರ್ಟ್ ಗೆ ಸುಮಾರು 15 ಜನ ಭದ್ರತಾ ಸಿಬ್ಬಂದಿ ಇದ್ದಾರೆ. ಭದ್ರತಾ ಸಿಬ್ಬಂದಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕೆಲಸವನ್ನು ಮಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ನಮ್ಮ ರೆಸಾರ್ಟ್ ಯಾರೇ ಬಂದರು ಭದ್ರತಾ ಸಿಬ್ಬಂದಿ ಬಳಿ ತಮ್ಮ ಪೂರ್ಣ ವಿಳಾಸ, ವಿವರವನ್ನು ನೀಡಿಲ್ಲ ಎಂದರೆ ಒಳಗೆ ಬಿಡುವುದಿಲ್ಲ ಎಂದರೆ ಸರಿ.

ಘಟನೆಯಾದ ದಿನ ರಾಮಕೃಷ್ಣ ಎಂಬುವರು ಭದ್ರತಾ ಕರ್ತವ್ಯದಲಿದ್ದರು ಹಾಗೂ ಬೇರೆ ಯಾರು ಇದ್ದರು ಎಂದು ನನಗೆ ಈಗ ನೆನಪಿಲ್ಲ. ಸದರಿ ರಾಮಕೃಷ್ಣರವರನ್ನು ಪೋಲಿಸರು ವಿಚಾರಣೆ ಮಾಡಿರುತ್ತಾರೆ. ಸದರಿ ದಿನ ಬೇರೆ ಯಾರು ನಿಮ್ಮ ರೆಸಾರ್ಟ್ ಗೆ ಬಂದು ಹೋಗಿರುತ್ತಾರೆ ಎಂದು ಮಾಹಿತಿಯನ್ನು ತೆಗೆದುಕೊಂಡಿರುವುದಿಲ್ಲ. ನಮ್ಮ

ರೆಸಾರ್ಟ್ ನಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸಿಸಿ ಕ್ಯಾಮಾರಾ ಗಳನ್ನು ಮುಖ್ಯವಾದ ಸ್ಥಳಗಳಲ್ಲಿ ಮಾತ್ರ ಅಳವಡಿಸಲಾಗಿದೆ. ಆದರೆ ಎಲ್ಲಾ ಸ್ಥಳಗಳಲ್ಲಿ ಇಲ್ಲ. ಮುಖ್ಯ ಸ್ಥಳಗಳೆಂದರೆ ರೆಸ್ಟೂರೆಂಟ್, ಅಡಿಗೆ ಮನೆ ಮತ್ತು ಗೇಟಿನ ಬಳಿ ಸಿಸಿ ಕ್ಯಾಮಾರಾ ಗಳನ್ನು ಅಳವಡಿಸಿದ್ದೇವೆ. ನಮ್ಮ ರೆಸಾರ್ಟ್ ನ ಸುತ್ತಲೂ ಕಾಂಪೌಂಡ್ ಭದ್ರತೆ ಇರುವುದಿಲ್ಲ ಅದರೆ ತಂತಿ ಬೇಲಿಯನ್ನು ಹಾಕಿರುತ್ತೇವೆ.

ಸಾಮಾನ್ಯವಾಗಿ ಎಲ್ಲಾ ಕಿಟಕಿ, ಬಾಗಿಲುಗಳನ್ನು ಮುಚ್ಚಿ ಅತಿಥಿಗಳು ಒಳಗೆ ಇರುತಾರೆ ಎಂದರೆ ಸರಿ. ಅತಿಥಿಗಳು ಬಂದ ಸಂದರ್ಭದಲ್ಲಿ ಎಲ್ಲೆ ಹೋಗಬೇಕಾದರೂ ಬಾಗಿಲನ್ನುಹಾಕಿಕೊಂಡು ಹೋಗುವಂತೆ ನಾವು ತಿಳಿಸುತ್ತೇವೆ. ಅದು ಅಲ್ಲದೆ ನಮ್ಮ ರೆಸಾರ್ಟ್ ನಲ್ಲಿ ಲಾಕರ್ ನ ವ್ಯವಸ್ಥೆ ಇದ್ದು ಬೆಲೆ ಬಾಳುವ ವಸ್ತುಗಳನ್ನು ಲಾಕರ್ ನಲ್ಲಿ ಟ್ಟು ಭದ್ರಪಡಿಸಿಕೊಳ್ಳಬೇಕೆಂದು ತಿಳಿಸುತ್ತೇವೆ. ಬೆಲೆ ಬಾಳುವ ವಸ್ತುಗಳನ್ನು ಲಾಕರ್ ನಲ್ಲಿ ಇಟ್ಟು ಹೋಗುವಂತೆ ಸೂಚನೆಯನ್ನು ನೀಡುತ್ತೇವೆ. ಕಳುವಾದ ಚಿನ್ನಾಭರಣಗಳನ್ನು ನಮ್ಮ ರೆಸಾರ್ಟ್ ನ ಲಾಕರ್ ನಲ್ಲಿ ಚಾಸಾ-2 ಮತ್ತು 3 ರವರು ಇಟ್ಟಿರುವುದಿಲ್ಲ. ಕಾಟೇಜ್ ನಂ 408, 302 ಮತ್ತು 507 ಗಳಿಗೆ ಹೋಗಬೇಕಾದರೆ ಸಾಮಾನ್ಯವಾಗಿ ಮುಖ್ಯದ್ವಾರದಿಂದಲೇ ಹೋಗಬೇಕೆಂದರೆ ಸರಿ.

ಸದರಿ ಮುಖ್ಯದ್ವಾರದಿಂದ ಘಟನೆಯಾದ ದಿನ ಅತಿಥಿಗಳಲ್ಲದೆ ಬೇರೆಯವರು ಹೋಗಿ ಬಂದಿರುವ ಬಗೆ ನಾವು ಖಾತ್ರಿ ಪಡಿಸಿಕೊಂಡಿರುವುದಿಲ್ಲ. ಆರೋಪಿತರು ಕಳ್ಳತನ ಮಾಡಲು ಬಾಗಿಲನ್ನು ಮೀಟಿದ ಸಂದರ್ಭದಲ್ಲಿ ಅದು ಮುರಿದಿರುವ ಕುರುಹುಗಳಿತ್ತು. ಸದರಿ ಮುರಿದ ಬಾಗಿಲಿನ ಚೂರುಗಳನ್ನು ಪೋಲಿಸರು ವಶಪಡಿಸಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವಾವ ರೂಮಿಗೆ ಯಾವಾವ ದಿಕ್ಕಿನ ಬಾಗಿಲು ಮುರಿಯಲಾಗಿತ್ತು ಎಂದು ನನ್ನ ಪಿರ್ಯಾದಿನಲ್ಲಿ ನಮೂದು ಮಾಡಿರುವುದಿಲ್ಲ. ಪೋಲಿಸರು ಸ್ಥಳಕ್ಕೆ ಬರುವ ಮೊದಲೇ ನಿಪಿ1 ಪುಕಾರನ್ನು ನಮ್ಮ ರೆಸಾರ್ಟ್ ನಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ.

ಸದರಿ ಪಿರ್ಯಾದನ್ನು ಬೆರಳಚ್ಚು ಮಾಡಿದ ನಂತರ ರೆಸಾರ್ಟ್ ನ ಮಾಲೀಕರಿಗೆ ಕಳುಹಿಸಿಕೊಟ್ಟಿರುತ್ತೇವೆ. ಸದರಿ ಚಿನ್ನದ ಬಳೆ, ಓಲೆ, ಮಾಂಗಲ್ಯದ ಸರ, ಡೈಮಂಡ್ ರಿಂಗ್, ನೆಕ್ಲಸ್ ಎಷ್ಟು ಎಷ್ಟು ತೂಕ ಇತ್ತು ಎಂದು ನಾವು ಅದರ ಮಾಲೀಕರಿಂದ

ತಿಳಿದುಕೊಂಡಿರುವುದಿಲ್ಲ ಹಾಗೂ ಅದರ ಬಗ್ಗೆ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಪರ್ಸ್ ಎಂದು ನಿಮ್ಮ ಪಿರ್ಯಾದಿಯಲ್ಲಿ ನಮೂದು ಮಾಡಿದ್ದು, ಅದು ಯಾರಿಗೆ ಸೇರಿದ್ದು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ2 ರಿಂದ 4 ರವರ ಬಳಿ ವಿದೇಶ ಕರೆನ್ಸಿ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ಅವರು ನೀಡಿದ ಪಿರ್ಯಾದಿನ ಆಧಾರದ ಮೇಲೆ ನಾನು ನನ್ನ ಪಿರ್ಯಾದನ್ನು ನೀಡಿರುತ್ತೇನೆ.

ನಮ್ಮ ಅತಿಥಿಗಳು ಬೇರೆ ಬೇರೆ ರಾಜ್ಯಗಳಿಂದ ಬರುವ ಕಾರಣ ಅವರು ಪದೇ ಪದೇ ನ್ಯಾಯಾಲಯಕ್ಕೆ ಬರಲು ಸಾಧ್ಯವಿಲ್ಲದ ಕಾರಣ ಅವರು ನೇರವಾಗಿ ಪೋಲಿಸರಿಗೆ ಪಿರ್ಯಾದನ್ನು ನೀಡಿರುವುದಿಲ್ಲ. ಆದರೆ ಅವರು ನಮಗೆ ಪಿರ್ಯಾದನ್ನು ನೀಡಿರುತ್ತಾರೆ. ನಾವು ಪೋಲಿಸರಿಗೆ ಪಿರ್ಯಾದನ್ನು ನೀಡಿರುತ್ತೇವೆ. ನೀವು ಹೇಳಿದ ರೀತಿಯಲ್ಲಿ ಯಾವುದೇ ಕಳ್ಳತನ ಆಗಿರುವುದಿಲ್ಲ. ಆದ ಕಾರಣ ಅವರು ನೇರವಾಗಿ ಪಿರ್ಯಾದನ್ನು ನೀಡದೇ ನೀವು ಆರೊಪಿತರಿಗೆತೊಂದರೆ ಕೊಡುವ ಉದ್ದೇಶದಿಂದ ಪಿರ್ಯಾದನ್ನು ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಕಳ್ಳತನವಾದ ವಸ್ತುಗಳು ಸಿಗಬಹುದೆಂದು ಕಾಟೇಜ್‌ನ ಸುತ್ತಮುತ್ತಲು ಹುಡುಕಿರುತ್ತೇವೆ ಆದರೆ ಅವುಗಳು ಸಿಕ್ಕಿರುವುದಿಲ್ಲ.

ನೀವು ಮತ್ತು ನಿಮ್ಮ ಕೊಠಡಿಯ ನಿರ್ವಹಕರು ಕಳ್ಳತನದ ಕೃತ್ಯದಲ್ಲಿ ಭಾಗವಹಿಸಿ ಆರೋಪಿತರ ಮೇಲೆ ಸುಳ್ಳು ಪಿರ್ಯಾದನ್ನು ನೀಡಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಪಿರ್ಯಾದು ನೀಡಿದ ತಕ್ಷಣ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ನಾವು ಎಲ್ಲಾ ಪರಿಶೀಲನೆ ಮಾಡಿದ ನಂತರ ಪೋಲಿಸರಿಗೆ ಪಿರ್ಯಾದನ್ನು ನೀಡಿರುತ್ತೇವೆ. ಮಹಜರನ್ನು ಎಷ್ಟು ಸಮಯಕ್ಕೆ ಬರೆದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಆದರೆ ಸದರಿ ಮಹಜರಿನಲ್ಲಿ ಏನು ಬರೆದಿದ್ದಾರೆಂದು ನಾನು ಓದಿರುತ್ತೇನೆ. ಮಹಜರನ್ನು ನಮ್ಮ ಕಛೇರಿಯಲ್ಲಿ ಬರೆದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೃತ್ಯ ಸ್ಥಳದಲ್ಲೆ ಮಹಜರನ್ನು ಬರೆದಿರುತ್ತಾರೆ.

ಸದರಿ ಮಹಜರಗಳನ್ನು ಒಬ್ಬರೆ ಬರೆದರ ಅಥವಾ ಬೇರೆ ಬೇರೆಯವರು ಬರೆದರ ಎಂದರೆ ಆದರೆ ನನಗೆ ಈಗ ನೆನಪಿಲ್ಲ. ಮಹಜರಿನ ಸಂದರ್ಭದಲಿ ಪೋಲಿಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲಿಲ್ಲ. ಮೂರು ಮಹಜರಗಳಲ್ಲಿ ಕಾಟೇಜ್ ಸಂಖ್ಯೆ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಾಟೇಜ್ ಗಳ ಚೆಕ್

ಬಂಧಿ ನನಗೆ ಗೊತ್ತಿಲ್ಲ. ನಿಪಿ2 ರಿಂದ 4 ಮಹಜರುಗಳು ಬೇರೆ ಬೇರೆ ಕೈಬರಹಗಳಲ್ಲಿವೆ ಎಂದರೆ ಸರಿ. ಮಹಜರಿನ ಸಂದರ್ಭದಲ್ಲಿ ನಾನು, ಭದ್ರತಾ ಸಿಬ್ಬಂದಿಯಾದ ರಾಮಕೃಷ್ಣ ಮತ್ತು ಸುಬ್ಬಯ್ಯ ಎಂಬುವರು ಇದ್ದೆವು. ಈ ಪ್ರಕರಣಕ್ಕಾಗಿ ಈ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ವ್ಯಕ್ತಿಗಳು ಮಹಜರಿನಲ್ಲಿ ಸಹಿ ಮಾಡಿರುವ ಸಂದರ್ಭದಲ್ಲಿ ತಮ್ಮ ಹೆಸರು, ಪೂರ್ಣ ವಿಳಾಸವನ್ನು ನಮೂದು ಮಾಡಿರುವುದಿಲ್ಲ.

ಪೋಲಿಸರವರ ಮುಲಾಜಿನ ಮೇರೆಗೆ ನೀವು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮಹಜರ್ ಗಳನ್ನು ಠಾಣೆಯಲ್ಲೆ ಬರೆದು ನೀವು ಅಲ್ಲಿ ಹೋಗಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಮ್ಮ ರೆಸಾರ್ಟ್ ನ ಮೊಹರ್ ನ್ನು ಸಹಿ ಮಾಡಿರುವ ಸ್ಥಳದಲ್ಲಿ ಹಾಕಿರುವುದಿಲ್ಲ. ಅದೇ ರೀತಿಯಾಗಿ ನಿಪಿ1 ಪಿರ್ಯಾದಿನಲ್ಲಿ ಕೂಡ ನಿಮ್ಮ ರೆಸಾರ್ಟ್ ನ ಮೊಹರ್ ನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರಿಂದ 3 ರವರು ನಮ್ಮ ರೆಸಾರ್ಟ್ ನಲ್ಲಿ ತಂಗಿದ್ದ ಬಗ್ಗೆ ನೀಡಿದಂತಹ ಬಿಲ್ಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಿಮ್ಮ ಮಾಲೀಕರಿಗೆ ಮಾಹಿತಿ ಇಲ್ಲದೆ ಸುಳ್ಳು ಪಿರ್ಯಾದನ್ನು ಆರೋತರ ವಿರುದ್ದ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇದೆ.

ಸಹಿ/-

**(ಕೋನಪ್ಪ ಎನ್.ವಿ)**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ವಿರಾಜಪೇಟೆ